# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ. ವೆಂಕಟೇಶ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಹರೀಸಂದ್ರ ಗ್ರಾಮ ಪಂಚಾಯತಿ ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ, ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14ಎ ಅಡಿಯಲ್ಲಿ ಮಾನ್ಯ ಉಪಲೋಕಯುಕ್ತರಿಗೆ ವಹಿಸುವ ಬಗ್ಗೆ – ಆದೇಶ.

**ಓದಲಾಗಿದೆ**

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ D.O.No. Compt/Uplok/BD/1168/2015/DRE-5, ದಿನಾಂಕ: 25.02.2017.

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಇವರ ಪತ್ರದ ಸಂಗಡ ಕಳುಹಿಸಿರುವ ಮಾನ್ಯ ಉಪಲೋಕಾಯುಕ್ತರು ದಿನಾಂಕ: 14.02.2017 ರಂದು ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ಸಲ್ಲಿಸಿರುವ ವರದಿಯಲ್ಲಿ ಈ ಕೆಳಗಿನಂತೆ ತಿಳಿಸಿರುತ್ತಾರೆ.

1. ಈ ದೂರನ್ನು ಶ್ರೀ. ರಮೇಶ್ ಬಿನ್ ಲೇಟ್ ತಿಮ್ಮಾಭೋವಿ, ಪಾದರಹಳ್ಳಿ ಗ್ರಾಮ ಹರೀಸಂದ್ರ ಅಂಚೆ, ಕಸಬಾ ಹೋಬಳಿ, ರಾಮನಗರ ತಾಲ್ಲೂಕು ಮತ್ತು ಜಿಲ್ಲೆ, ಇವರು ಶ್ರೀ. ವೆಂಕಟೇಶ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಹರೀಸಂದ್ರ ಗ್ರಾಮ ಪಂಚಾಯತಿ ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ, ವಿರುದ್ಧ ಸಲ್ಲಿಸಿದ್ದಾರೆ.

2. ದೂರುದಾರರು ತಮ್ಮ ದೂರಿನಲ್ಲಿ, ಶ್ರೀ. ರಮೇಶ್ ಬಾದರಹಳ್ಳಿ ಕಸಬಾ ಹೋಬಳಿ ರಾಮನಗರ ನಿವಾಸಿ ಇವರು ವೆಂಕಟೇಶ್ ಪಿ.ಡಿ.ಓ. ಹರಿಸಂದ್ರ ಗ್ರಾಮ ಪಂಚಾಯಿತಿ ಇವರ ವಿರುದ್ಧ ಸಲ್ಲಿಸಿದ್ದಾರೆ. ತನಗೆ ಸಂಬಂಧಿಸಿರುವ ಖಾನೇಷು ಮಾರಿ ನಂ: 804 ಕ್ಕೆ ಹೊಂದಿಕೊಂಡು ಮನೆಯ ಹಿಂಭಾಗದಲ್ಲಿ ಅನಧಿಕೃತವಾಗಿ ಖಾಸಗಿ ವ್ಯಕ್ತಿಗಳು ತಿಪ್ಪೆ ಹಾಕಿ ಕಳಿ ಬೇಲಿಯನ್ನು ಬೆಳಸಿ ವಾತಾವರಣವನ್ನು ಹಾಳು ಮಾಡುತ್ತಿದ್ದಾರೆ ಇದರಿಂದ ರೋಗಗಳು ಹರಡುತ್ತಿದೆ. ವಿಷ ಪೂರಿತ ಹಾವು ಹೆಗ್ಗಣಗಳು ಮನೆಗೆ ಬರುತ್ತಿದೆ. ಆದ್ದರಿಂದ ಎದುರುದಾರರಿಗೆ ದೂರು ಕೊಟ್ಟಾಗಲು ಯಾವುದೇ ಕ್ರಮ ತೆಗೆದುಕೊಂಡಿಲ್ಲ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯವರು ಪಿ.ಡಿ.ಓ ರವರಿಗೆ ಪತ್ರ ಬರೆದು ಪಾದರಹಳ್ಳಿ ನಿವಾಸಿಗಳು ದೂರುದಾರರು ಮನೆಯ ಅಕ್ಕಪಕ್ಕದಲ್ಲಿ ದನ ಕುರಿಗಳನ್ನು ಕಟ್ಟಿ ಕೊಟಿಗೆಗಳಿಂದ ಚರಂಡಿಗೆ ಕಲುಷಿತ ನೀರನ್ನು ಬಿಟ್ಟಿದ್ದಾರೆ ಅವರ ವಿರುದ್ಧ ಕ್ರಮ ಕೈಗೊಳ್ಳಲು ಕೋರಿದ್ದಾರೆ. ಆದರೆ ಅವರ ವಿರುದ್ಧ ಕ್ರಮ ಕೈಗೊಂಡಿಲ್ಲವೆಂದು ದೂರು ಸಲ್ಲಿಸಿದ್ದು ಇರುತ್ತದೆ.

3. ಈ ದೂರನ್ನು ತನಿಖೆಗೆ ತೆಗೆದುಕೊಂಡು ಎದುರುದಾರರಿಂದ ಆಕ್ಷೇಪಣೆಗಳನ್ನು ಕೇಳಲಾಗಿದೆ. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದಿ: 16.1.2014 ರಂದು ದೂರುದಾರರು ಅರ್ಜಿ ಸಲ್ಲಿಸಿದ್ದರು. ಈ ವಿಷಯದ ಬಗ್ಗೆ ಸ್ಥಳ ಪರಿಶೀಲನೆ ಮಾಡಿ ಅಜುಬಾಜುದಾರರಿಗೆ ತಿಳುವಳಿಕೆ ಪತ್ರ ನೀಡಲಾಗಿದೆ. ಗ್ರಾಮಸ್ಥರ ಸಮೂಹದಲ್ಲಿ ಮಹಜರ್ ಮಾಡಲಾಗಿದೆ. ಪುಟ್ಟ ಸ್ವಾಮಿ ಗೌಡ ಎನ್ನುವವರು ದೂರುದಾರರಾದ ರಮೇಶ್ ಇವರ ವಿರುದ್ಧವೂ ಸಹ ಅರ್ಜಿ ಸಲ್ಲಿಸಿರುತ್ತಾರೆ ಅಂತ ಹೇಳುತ್ತಾರೆ.

–

4. ಈ ಆಕ್ಷೇಪಣೆಗಳ ಮೇಲೆ ದೂರುದಾರರ ಪ್ರತ್ಯುತ್ತರ ಕೇಳಲಾಗಿ ಅವರು ದೂರಿನ ಅಂಶಗಳನ್ನೇ ಪುನರ್ ಉಚ್ಚರಿಸಿದ್ದಾರೆ. ಕೆಲವು ಭಾವ ಚಿತ್ರಗಳನ್ನು ಲಗತ್ತಿಸಿರುತ್ತಾರೆ.

5. ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. ದೂರುದಾರರು ನಮ್ಮ ಕಛೇರಿಯಲ್ಲಿ ಮಾತ್ರ ವಲ್ಲದೆ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಹ ದೂರು ಕೊಟ್ಟಿದ್ದಾರೆ ಮತ್ತು ಅವರಿಂದ ನಿರ್ದೇಶನವನ್ನು ಸಹ ಪಡೆದಿದ್ದಾರೆ. ದೂರುದಾರರು ಮತ್ತು ಅವರಿಂದ ನಿರ್ದೇಶನವನ್ನು ಸಹ ಪಡೆದಿದ್ದಾರೆ. ದೂರುದಾರರು ಹೇಳುತ್ತಿರುವುದೇನೆಂದರೆ ಅವರ ಮನೆಯ ಹಿಂದಿನ ರಸ್ತೆಯನ್ನು ಪುಟ್ಟಸ್ವಾಮಿ ಮತ್ತು ಇತರರು ಒತ್ತುವರಿ ಮಾಡಿಕೊಂಡು ಅದರ ಮೇಲೆ ತಿಪ್ಪೆ ಹಾಕಿ ಕಳ್ಳಿ ಬೇಲಿಯನ್ನು ಬೆಳಿಸಿದ್ದಾರೆ. ಇದೇ ವಿಷಯವಾಗಿ ದೂರುದಾರರ ಮೇಲೂ ಸಹ ಪುಟ್ಟಸ್ವಾಮಿ ಗೌಡ ದೂರು ಕೊಟ್ಟಿದ್ದಾರೆಂದು ಎದುರುದಾರರು ಹೇಳುತ್ತಾರೆ. ಕರ್ನಾಟಕ ಪಂಚಾಯಿತಿ ಅಧಿನಿಯಮದ ಕಲಂ 72 ರಲ್ಲಿ ಖಾಲಿ ಸ್ಥಳಗಳ ಮೇಲೆ ಮತ್ತು ಸಾರ್ವಜನಿಕ ಓಣಿಗಳ ಮೇಲೆ ಯಾವುದಾದರು ಅತಿಕ್ರಮಣವಾದರೆ ಏನು ಕ್ರಮ ಕೈಗೊಳ್ಳಬೇಕು ಎನ್ನುವುದನ್ನು ವಿವರಿಸಲಾಗಿದೆ. ಖಾಸಗಿ ಜಾಗಗಳಿಗೆ ಕಲಂ 72 ಅನ್ವಯಿಸುವುದಿಲ್ಲ 100 ರೂಗಳ ವರೆಗೆ ಈ ಅಪರಾಧಕ್ಕಾಗಿ ದಂಡ ವಿಧಿಸಬಹುದು ಮತ್ತು ಪ್ರತಿ ದಿವಸ 5 ರೂಗಳಂತೆ ದಂಡ ವಿಧಿಸುತ್ತಾ ಇರಬಹುದು ಅಂತ ವಿಧಿಸಲಾಗಿದೆ. ಇದಲ್ಲದೆ ರಸ್ತೆಗಳ ಮೇಲೆ ಧನಕರುಗಳನ್ನು ಕಟ್ಟುವುದು ಅಥವಾ ಹೊಲಸು ಮಾಡುವುದು ಚರಂಡಿಗಳಲ್ಲಿ ಹೊಲಸು ನೀರನ್ನು ಬಿಡುವುದು ಇಂತಹ ಸಂದರ್ಭಗಳಲ್ಲಿ ಕಲಂ 75 ರಡಿಯಲ್ಲಿ ಪಂಚಾಯಿತಿಯ ಕ್ರಮ ಕೈಗೊಳ್ಳಬೇಕಾಗುತ್ತದೆ. ನೋಟೀಸಿನಲ್ಲಿ ತಿಳಿಸಿರುವ ಅವಧಿಯ ಒಳಗೆ ನೋಟೀಸು ಪಡೆದವರು ಅದರಂತೆ ನಡೆದುಕೊಳ್ಳದಿದ್ದರೆ ಪಂಚಾಯಿತಿಯೇ ಆ ಕೆಲಸವನ್ನು ಮಾಡಿ ಅಂತಹ ಮನೆಗಳ ಮಾಲೀಕರಿಂದ ಇಲ್ಲವೆ ಬಾಡಿಗೆದಾರರಿಂದ ಖರ್ಚಾದ ಹಣ ವಸೂಲಿ ಮಾಡಬೇಕು ಮತ್ತು ದಂಡವನ್ನು ವಿಧಿಸಬೇಕು ಈ ಕರ್ತವ್ಯವನ್ನು ದೂರುದಾರರ ಮೇಲೆ ದೂರು ಬಂದರೂ ಸಹ ಪಂಚಾಯಿತಿಯು ಪಾಲಿಸತಕ್ಕದ್ದಾಗಿದೆ ಆದರೆ ಎದುರುದಾರರು ಕಲಂ 72 ಮತ್ತು 75 ಕರ್ನಾಟಕ ಪಂಚಾಯಿತಿ ರಾಜ್ ಅಧಿನಿಯಮದಡಿಯಲ್ಲಿ ಯಾವುದೇ ಕ್ರಮ ತೆಗೆದುಕೊಳ್ಳದೆ ಕೇವಲ ನೋಟೀಸನ್ನು ಮಾತ್ರ ಕೊಟ್ಟಿದ್ದಾರೆ. ಆದ್ದರಿಂದ ಎದುರುದಾರರು ಕರ್ತವ್ಯ ನಿರ್ಲಕ್ಷ್ಯತನ ತೋರಿದ್ದಾರೆಂದು ಹೇಳಲು ಸಾಕಷ್ಟು ಆಧಾರಗಳಿವೆ.

ಈ ಹಿನ್ನೆಲೆಯಲ್ಲಿ ಶ್ರೀ. ವೆಂಕಟೇಶ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಹರೀಸಂದ್ರ ಗ್ರಾಮ ಪಂಚಾಯತಿ ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ, ಇವರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966 ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14 (ಎ) ರಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/202/ಗ್ರಾಪಂಕಾ/2017 ಬೆಂಗಳೂರು, ದಿನಾಂಕ-28-03-2017.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ. ವೆಂಕಟೇಶ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಹರೀಸಂದ್ರ ಗ್ರಾಮ ಪಂಚಾಯತಿ ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ, ಇವರ ವಿರುದ್ಧ ಇಲಾಖಾ ವಿಚಾರಣಾ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಸದರಿ ನಿಯಮಗಳು ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ನಿಯಮಾನುಸಾರ ಸೂಕ್ತ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ಬಿ. ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಪುಟ 1 ರಿಂದ 64 ರವರೆಗೆ ಮೂಲ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಿ ಹಿಂದಿರುಗಿಸಿದೆ).
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ರಾಮನಗರ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ.
6. ಶ್ರೀ. ವೆಂಕಟೇಶ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಹರೀಸಂದ್ರ ಗ್ರಾಮ ಪಂಚಾಯತಿ ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ.
7. ಗಣಕಕೋಶ.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.